# ಪಠ್ಯಪುಸ್ತಕ ಅಭಿವೃದ್ಧಿ ಪ್ರಕ್ರಿಯೆಗಳು - ಕೆಲವು ಪ್ರತಿಫಲನಗಳು ಮತ್ತು ಕಲಿಕೆಗಳು

ಅರವಿಂದ್ ಸರ್ದಾನ

ಹಲವು ವರ್ಷಗಳ ನನ್ನ ಸಹೋದ್ಯೋಗಿಯೊಬ್ಬರು ಇತ್ತೀಚಿನ ಸಂವಾದವೊಂದರಲ್ಲಿ, 'ನೀವು ಇನ್ನೂ ಸರ್ಕಾರಗಳೊಂದಿಗೆ ಪಠ್ಯಪುಸ್ತಕ ಅಭಿವೃದ್ಧಿಪಡಿಸುವ ವಿಶ್ವಾಸ ಹೊಂದಿದ್ದೀರಾ?' ಎಂದು ಒಂದು ಬಗೆಯಲ್ಲಿ ತಮಾಷೆಯಾಗಿ ಮತ್ತೊಂದೆಡೆ ಗಂಭೀರವೂ ಆಗಿ ಕೇಳಿದರು. ಗಂಭೀರವಾದ ಅಂಶವೆಂದರೆ, ಮಧ್ಯಪ್ರದೇಶದಲ್ಲಿ (ಎಂಪಿ) ಮೂರು ದಶಕಗಳ ಕಾಲ ಕೆಲಸ ಮಾಡಿದ ಅನಂತರವೂ ಎಚ್‌ಎಸ್‌ಟಿಪಿ, ಸಮಾಜ ವಿಜ್ಞಾನ ಮತ್ತು **ಪ್ರಶಿಕ್ಷ**ದಂತಹ ಪ್ರಯೋಗಗಳು ನಡೆದಿವೆ ಎಂಬ ಸಾಂಸ್ಥಿಕ ಸ್ಮರಣೆ ಇಲ್ಲ. 2002 ರಲ್ಲಿ ಔಪಚಾರಿಕವಾಗಿ ಮುಚ್ಚಲ್ಪಟ್ಟ ಅನಂತರ ಅವೆಲ್ಲವನ್ನೂ ಸಮಾಧಿ ಮಾಡಲಾಗಿದೆ. ಪ್ರಸ್ತುತ ಪಠ್ಯಪುಸ್ತಕಗಳು 1980 ರ ದಶಕದಲ್ಲಿ ಹೇಗಿತ್ತೋ ಅದನ್ನು ಪ್ರತಿಬಿಂಬಿಸುತ್ತವೆ. ಸ್ವಲ್ಪ ಹೊತ್ತು, ನಾವು ಮತ್ತೆ ಅದೇ ಸ್ಥಳದಲ್ಲಿ ನಿಂತಿರುವಂತೆ ಕಾಣಿಸುತ್ತದೆ. ಪಠ್ಯಕ್ರಮದ ಆಯ್ಕೆಗಳು ಮತ್ತು ಪ್ರಸ್ತುತಿಯು ನಾವು ಒಮ್ಮೆ ಬದಲಾಯಿಸಲು ಬಯಸಿದ ಜ್ಞಾನ, ಶಿಕ್ಷಣಶಾಸ್ತ್ರ ಮತ್ತು ಶಿಕ್ಷಕರ ಪಾತ್ರಗಳಲ್ಲಿ ಅದೇ ತೆರನಾದ ದೃಷ್ಟಿಕೋನಗಳನ್ನು ಪ್ರತಿಫಲಿಸುತ್ತಿವೆ. ಆದಾಗ್ಯೂ, ಇದು ಇತರ ರಾಜ್ಯಗಳಿಗೆ ಮತ್ತು ರಾಷ್ಟ್ರೀಯ ಮಟ್ಟದಲ್ಲಿನ ಪ್ರಯತ್ನಗಳಿಗೆ ಹೋಲಿಸಿದಾಗ ನಿಜವಲ್ಲ. ನಾವು ರಾಜ್ಯ ಮಟ್ಟದಲ್ಲಿ ಪಠ್ಯಕ್ರಮ ನವೀಕರಣ ಪ್ರಕ್ರಿಯೆಗಳನ್ನು ಪ್ರಾರಂಭಿಸುವ ತಂಡಗಳ ಭಾಗವಾಗಿದ್ದರಿಂದ ಇತರ ಹಲವು ರಾಜ್ಯ ಸರ್ಕಾರಗಳು ನಮ್ಮನ್ನು ಆಹ್ವಾನಿಸಿದ್ದಾರೆ. ಅಂತೆಯೇ, 2005 ರ ಸುಮಾರಿಗೆ ಎನ್‌ಸಿಇಆರ್‌ಟಿ ಸಿದ್ಧಪಡಿಸಿದ ವಿಶೇಷವಾಗಿ ವಿಜ್ಞಾನ ಮತ್ತು ಗಣಿತದ ಪಠ್ಯಪುಸ್ತಕಗಳನ್ನು ಇತರ ರಾಜ್ಯಗಳು ಬಳಸುತ್ತಿವೆ. ಮಧ್ಯಪ್ರದೇಶವೂ ಸಹ ಈ ಪಠ್ಯಪುಸ್ತಕಗಳನ್ನು ಅಳವಡಿಸಿಕೊಂಡಿದೆ. ಆದ್ದರಿಂದ ಇದೇ ರೀತಿಯ ಆಲೋಚನೆಗಳು ವಿಭಿನ್ನ ರೀತಿಯಲ್ಲಿ ಬಹುಶಃ ದೀರ್ಘಾವಧಿಯ ರೀತಿಯಲ್ಲಿ ಬಂದಿವೆ. ಇದು ಚರ್ಚೆಯಾಗಬಹುದು. ಆದರೆ ರಾಜ್ಯದ ಸಂದರ್ಭಗಳಿಗೆ ಉಚಿತಗೊಳಿಸುವ ಯಾವುದೇ ಪ್ರಯತ್ನವಿಲ್ಲ. ಸಾಮಾನ್ಯವಾಗಿ ವಿಷಯಕ್ಕೆ ನಿಗದಿಪಡಿಸಲಾದ ಆದ್ಯತೆಯನ್ನು ಪ್ರತಿಬಿಂಬಿಸುವುದರಿಂದ ಸಮಾಜ ವಿಜ್ಞಾನವನ್ನು ಬಿಟ್ಟುಬಿಡಲಾಗಿದೆ ಎಂದು ನನ್ನ ಸಹೋದ್ಯೋಗಿ ಮರುಪ್ರಶ್ನೆ ಮಾಡಬಹುದು.

ಪಠ್ಯಪುಸ್ತಕ ಅಭಿವೃದ್ಧಿ ಪ್ರಕ್ರಿಯೆಯು ಅನುಭವದ ಬೀಜಗಳನ್ನು ಪ್ರಸಾರ ಮಾಡುವ ಒಂದು ಮಾರ್ಗವೇ, ಅದಕ್ಕೆ ನೀರುಣಿಸಿದರೆ ಖಂಡಿತವಾಗಿಯೂ ಪ್ರತಿಕ್ರಿಯಿಸುತ್ತದೆಯೇ? ಖಂಡಿತವಾಗಿ, ಅದನ್ನು ತುಳಿಯಲಾಗಿದೆಯೇ ಅಥವಾ ಪೂರ್ಣವಾಗಿ ಬೆಳೆದ ಮರವಲ್ಲದಿದ್ದರೂ ಒಂದು ಗಿಡವಾಗಿ ಹೊರಹೊಮ್ಮುತ್ತದೆಯೇ ಎಂದು ನಮಗೆ ತಿಳಿಯುವ ಯಾವುದೇ ಮಾರ್ಗವಿಲ್ಲ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, 2002 ರಲ್ಲಿ ಎಂಪಿಯಲ್ಲಿ *ಏಕಲವ್ಯದ*

ಕಾರ್ಯಕ್ರಮಗಳನ್ನು ಮುಚ್ಚುವುದನ್ನು ಹೊರತುಪಡಿಸಿ, ಇತ್ತೀಚೆಗೆ ಹೂಳಲಾಗಿರುವ ರಾಜ್ಯದ ಪ್ರಯತ್ನಗಳನ್ನು ಅಂದರೆ 1995 ರ ಅನಂತರದವುಗಳನ್ನು ಸಹ ನಾವು ಎಣಿಸೋಣ.

ಇವುಗಳಲ್ಲಿ ರಾಜಸ್ಥಾನದಲ್ಲಿನ *ಲೋಕ್ ಜುಂಬಿಶ್* (1998 ), ಅಸ್ಸಾಂನ ಎಸ್‌ಸಿಇಆರ್‌ಟಿ ಉಪಕ್ರಮ (2000 ), ಗುಜರಾತಿನ ಎಸ್‌ಸಿಇಆರ್‌ಟಿ ವಿಜ್ಞಾನ ಉಪಕ್ರಮ (2002), ದೆಹಲಿಯ ಎಸ್‌ಸಿಇಆರ್‌ಟಿ ಪ್ರಯತ್ನ (2003 ) ರಾಜಸ್ಥಾನದ ಎಸ್‌ಸಿಇಆರ್‌ಟಿ, ಐಸಿಐಸಿಐ ಫೌಂಡೇಶನ್ (2010) ನೇತೃತ್ವದ ಪ್ರಯತ್ನಗಳು ಸೇರಿವೆ. ಅವುಗಳು ಪ್ರತಿನಿಧಿಸುವ ಕಾರಣಗಳ ಸಂಯೋಜನೆಗಾಗಿ ಈ ಮುಚ್ಚುವಿಕೆಗಳನ್ನು ಅರ್ಥಮಾಡಿಕೊಳ್ಳಲು ಇದು ಸೂಚಿಸುತ್ತದೆ. ಸಾಂಸ್ಥಿಕ ಸ್ಮರಣೆ ಬದುಕುಳಿಯುವುದಿಲ್ಲ. ಆದರೆ ಅನುಭವದ ಬೀಜಗಳು ಕೆಲವು ಸುಪ್ತ ಸ್ಥಿತಿಯಲ್ಲಿ ಹೂತುಹೋಗಿದ್ದು, ಆಗಾಗ್ಗೆ ಹೊಸ ಅವಕಾಶಗಳಿಂದ ಪುನರುಜ್ಜೀವನಗೊಳ್ಳುತ್ತವೆಯೇ? ಅವು ದೀರ್ಘಕಾಲೀನ ಬದಲಾವಣೆಗೆ ಕೊಡುಗೆ ನೀಡುತ್ತವೆಯೇ?

ನಾವು ಜೊತೆಯಲ್ಲಿ ಕೆಲಸ ಮಾಡಿದ ರಾಜ್ಯಮಟ್ಟದ ಅನೇಕ ದಿಗ್ಗಜರು ಆನಂತರ ಪ್ರಾಥಮಿಕ ಶಾಲಾ ಶಿಕ್ಷಣ ಮತ್ತು *ಲೋಕ್ ಜಂಬಿಶ್* ಮತ್ತು ಇತರ ಕಾರ್ಯಕ್ರಮಗಳ ಡಿಪಿಇಪಿ ಕಾರ್ಯಾಗಾರಗಳಿಂದ ಈ ಆಲೋಚನೆಗಳನ್ನು ಪ್ರಾರಂಭಿಸಿದರು. ಪಠ್ಯಕ್ರಮ ಪ್ರಕ್ರಿಯೆಗಳು ಸಂಧಾನಗಳು ಮತ್ತು ವಿವಾದಾತ್ಮಕ ದೃಷ್ಟಿಕೋನಗಳ ನಡುವಿನ ಹೋರಾಟಗಳಾಗಿವೆ ಮತ್ತು ಅವು ಎಂದಿಗೂ ಸುಗಮ, ಏಕರೂಪದ ಹಾದಿಯಾಗಿರುವುದಿಲ್ಲ. ಅದೇ ಸಮಯದಲ್ಲಿ ಅನೇಕ ವರ್ಷಗಳ ಪ್ರಯತ್ನಗಳು, ರಾಜಕೀಯ ಅಥವಾ ಅಧಿಕಾರಶಾಹಿ ಮಟ್ಟದಲ್ಲಿನ ಬದಲಾವಣೆಗಳಿಂದಾಗಿ ತ್ವರಿತವಾಗಿ ಸಮಾಧಿಯಾಗುವುದನ್ನು ನೋಡುವುದು ಸಹ ನೋವು ಮತ್ತು ನಿರಾಶಾದಾಯಕವಾಗಿದೆ. ನಾವು ಇಪ್ಪತ್ತೈದು ವರ್ಷಗಳ ಕಾಲ ಈ ಕಾರ್ಯಕ್ರಮಗಳನ್ನು ಉಳಿಸಿಕೊಂಡಿದ್ದರೂ ಸಹ, ನಮಗೆ ನಾವೇ ಕೇಳಿಕೊಂಡ ಪ್ರಶ್ನೆಯೆಂದರೆ: *ಏಕಲವ್ಯ*ದಲ್ಲಿ, ವ್ಯವಸ್ಥೆಯಲ್ಲಿ ಸೂಕ್ಷ್ಮ ಪ್ರಾಯೋಗಿಕ ಮಟ್ಟದಿಂದ ಸ್ಥೂಲ ಬದಲಾವಣೆಗಳಿಗೆ ರೇಖಾತ್ಮಕ ಪರಿವರ್ತನೆಯನ್ನು ನಿರೀಕ್ಷಿಸುವಲ್ಲಿ ನಾವು ನಿಷ್ಕಪಟವಾಗಿದ್ದೇವೆಯೇ? ಸಿ ಎನ್ ಸುಬ್ರಮಣ್ಯಂ ಅವರನ್ನು ಉಲ್ಲೇಖಿಸುವುದಾದರೆ:

'ವಿಪರ್ಯಾಸವೆಂದರೆ ಹೊಸ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ ಅನಂತರ ನಾವೀನ್ಯದ ಉತ್ಸಾಹವು ಕ್ಷೀಣಿಸುವುದು ಕಾಣಿಸಿಕೊಂಡಿತು ಮತ್ತು 'ಪ್ಯಾಕೇಜ್' ತರಗತಿಯ ಪ್ರಕ್ರಿಯೆಗಳ ಇತರ ಅಂಶಗಳಾದ, ಶಿಕ್ಷಕರ ದೃಷ್ಟಿಕೋನ, ವಿಕೇಂದ್ರೀಕರಣ ಇತ್ಯಾದಿಗಳು ಹಿಂದಿನ ಸ್ಥಾನವನ್ನು ಪಡೆದುಕೊಂಡವು. ಇದರರ್ಥ ಹೊಸ ಆಲೋಚನೆಗಳು ವಿರಳವಾಗಿ ಕಾರ್ಯಗತಗೊಳ್ಳುತ್ತವೆ.'

ಆದಾಗ್ಯೂ, ಇಂದು ಹೆಣಗಾಡುತ್ತಿರುವವರಿಗೆ, ಈ ಪಠ್ಯಕ್ರಮದ ಉಪಕ್ರಮಗಳನ್ನು ದೊಡ್ಡ ಗುರಿಗಳತ್ತ ಕೊಂಡೊಯ್ಯಬಹುದಾದ ಕೆಲವು ಕಾರ್ಯತಂತ್ರದ ಪ್ರಯತ್ನಗಳಾಗಿ ಒಬ್ಬರು ಏನನ್ನು ಸೂಚಿಸಬಹುದು?

**ಪಠ್ಯಪುಸ್ತಕಗಳನ್ನಷ್ಟೇ ಅಭಿವೃದ್ಧಿಪಡಿಸುವುದಲ್ಲ, ಕಾರ್ಯಕ್ರಮದ ಅಭಿವೃದ್ಧಿ**

*ಏಕಲವ್ಯ*ದಲ್ಲಿನ ಅನುಭವದ ಒಂದು ಮುಖ್ಯ ಪಾಠವೆಂದರೆ ಅದು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಒಂದು ಕಾರ್ಯಕ್ರಮದ ಬೆಳವಣಿಗೆಯಾಗಿದೆ. ಪಠ್ಯಪುಸ್ತಕಗಳು ಬೇಡಿಕೆಯುಳ್ಳವು ಮತ್ತು ನಿರ್ಣಾಯಕವಾದವು. ಆದರೆ ಅವೇ ಅಂತಿಮ ಉದ್ದೇಶದ ಭಾಗವಲ್ಲ. ತರಗತಿಯ ಪ್ರಕ್ರಿಯೆಗಳಲ್ಲಿನ ಬದಲಾವಣೆಗಳೂ ಅಷ್ಟೇ ಮುಖ್ಯವಾದ ಅಂಶಗಳಾಗಿವೆ. ಇದು ಶಿಕ್ಷಕರ ಸಂವಾದ ಮತ್ತು ತರಬೇತಿಗಳಿಂದ  ಮಾತ್ರ ಸಂಭವಿಸಬಹುದು. ಸಂವಾದವು ದೃಷ್ಟಿಕೋನ, ಮೌಲ್ಯಗಳು ಮತ್ತು ಹೊಸ ವಿಷಯವನ್ನು ಕುರಿತುದಾಗಿದೆ. ಈ ತರಬೇತಿಗಳು ವರ್ಷದಲ್ಲಿ ಹದಿನೈದರಿಂದ ಇಪ್ಪತ್ತು ದಿನಗಳ ಕಾಲ ನಡೆಯುತ್ತಿದ್ದವು. ಇದರೊಂದಿಗೆ,  ಕಲಿಕಾ ಸಾಮಗ್ರಿಗಳನ್ನು ಪ್ರಯತ್ನಿಸಲಾಗುತ್ತಿದ್ದುದರಿಂದ, ನಿಯಮಿತ ತರಗತಿಯ ಅನುಸರಣೆ ಮತ್ತು ಶಿಕ್ಷಕರೊಂದಿಗೆ ಸಂವಹನ ನಡೆಯುತ್ತಿದ್ದವು. ನಿರ್ವಹಣೆಯ ಪ್ರಕ್ರಿಯೆಗಳು ಈ ಅಂಶಗಳಿಲ್ಲದೆ ಬದಲಾಗಲು ಸಾಧ್ಯವಿಲ್ಲ.

ಇದಕ್ಕೆ ವಿರುದ್ಧವಾಗಿ, ಎನ್‌ಸಿಇಆರ್‌ಟಿ ಮತ್ತು ಎಸ್‌ಸಿಇಆರ್‌ಟಿ ಪ್ರಕ್ರಿಯೆಗಳು ಕಟ್ಟುನಿಟ್ಟಾದ ಗಡುವನ್ನು ಹೊಂದಿರುವ ಪಠ್ಯಪುಸ್ತಕ ಅಭಿವೃದ್ಧಿ ತಂಡಗಳಾಗಿರುವುದು ಒಂದು ಪ್ರಮುಖ ನಿರ್ಬಂಧವಾಗಿದೆ. ಮೌಲ್ಯಮಾಪನಕ್ಕಾಗಿ ಕೆಲವು ಕನಿಷ್ಠ ತರಬೇತಿ ಮತ್ತು ಬದಲಾವಣೆಗಳನ್ನು ವ್ಯಕ್ತಪಡಿಸಲಾಗಿದೆ. ಆದಾಗ್ಯೂ, ನಮ್ಮ ಅನುಭವವು ಸೂಚಿಸುವಂತೆ, ಅದು ಕಾರ್ಯರೂಪಕ್ಕೆ ಬರುವುದಿಲ್ಲ. ಅಭಿವೃದ್ಧಿ ತಂಡಕ್ಕೆ ಅಗತ್ಯವಾದ ಗುರಿಗಳಾಗಿ ಶಿಕ್ಷಕರ ಸಂವಾದದ ಇತರ ಅಂಶಗಳನ್ನು ಅವರು ನಿಜವಾಗಿಯೂ ನಿಭಾಯಿಸುವುದಿಲ್ಲ ಅಥವಾ ನಿರ್ಮಿಸುವುದಿಲ್ಲ. (*ಬಾತ್ರಾ*) ಅಗತ್ಯವನ್ನು ಅಂಗೀಕರಿಸಲಾಯಿತು ಮತ್ತು ಅರ್ಥಮಾಡಿಕೊಳ್ಳಲಾಯಿತು. ಆದರೆ ಅನುಷ್ಠಾನಕ್ಕೆ ಯಾವುದೇ ಮಾರ್ಗಸೂಚಿ ಇಲ್ಲ. ಸಂವಿಧಾನದಲ್ಲಿನ ರಾಜ್ಯ ನೀತಿಯ ನಮ್ಮ ನಿರ್ದೇಶನ ತತ್ತ್ವಗಳಂತೆ ಇದು ಸಂಪೂರ್ಣವಾಗಿ ಅಪೇಕ್ಷಣೀಯ ಕಾರ್ಯವಾಗಿ ಉಳಿದಿದೆ: ಪಠ್ಯಪುಸ್ತಕ ಅಭಿವೃದ್ಧಿಯನ್ನು ಅನಂತರದ ಪ್ರಕ್ರಿಯೆಯಾಗಿ ತೆಗೆದುಕೊಳ್ಳಲಾಯಿತು. ಕಾರ್ಯಗತಗೊಳಿಸಲು ನಂಬಲರ್ಹವಾದ ಯೋಜನೆ ಇಲ್ಲದೆಯೇ ಆಲೋಚನೆಗಳನ್ನು ಪಠ್ಯಗಳಲ್ಲಿ ಹುದುಗಿಸಲಾಗಿದೆ. ಆದಾಗ್ಯೂ, ವಾಸ್ತವದಲ್ಲಿ, ಇದು ನಿರ್ಲಕ್ಷಿಸಲ್ಪಟ್ಟು ಕೊನೆಯಾಯಿತು.  ಏಕೆ ಹೀಗಾಗುತ್ತದೆ?

**ಸಾಂಸ್ಥಿಕ ನಿರ್ವಾತ**

ಒಂದು ಹಂತದಲ್ಲಿ, ವಿಶೇಷವಾಗಿ ಸಿಬಿಎಸ್‌ಇ ಶಾಲೆಗಳಿಗೆ ಸಂಬಂಧಿಸಿದಂತೆ, ಸಾಂಸ್ಥಿಕ ನಿರ್ವಾತವಿದೆ. ಸಿಬಿಎಸ್‌ಇಗೆ ಸಂಯೋಜಿತವಾಗಿರುವ ಶಾಲೆಗಳು ದೇಶಾದ್ಯಂತ ಹರಡಿಕೊಂಡಿವೆ ಮತ್ತು ಎರಡು  ಬಗೆಯಾಗಿವೆ- ಒಂದು, *ಕೇಂದ್ರೀಯ ವಿದ್ಯಾಲಯ*ಗಳು (ಕೆವಿ) *ಹಾಗೂ ನವೋದಯ*ಗಳಂತಹ ಸರ್ಕಾರಿ ಶಾಲೆಗಳು ಮತ್ತು ಎರಡು, 'ಎನ್‌ಸಿಇಆರ್‌ಟಿ ಪಠ್ಯಕ್ರಮದ ಪ್ರಕಾರ' ಎಂದು ಹೆಸರು ಹೊತ್ತ, ಪಠ್ಯಪುಸ್ತಕಗಳನ್ನು ಬಳಸುವ ಶಿಕ್ಷಕರ ದೃಷ್ಟಿಕೋನದೊಂದಿಗೆ ಅಥವಾ ತರಬೇತಿಯನ್ನು ಸಂಸ್ಥೆಯ ನಿರ್ವಹಣೆಗೆ ಬಿಟ್ಟು ಖಾಸಗಿಯಾಗಿ ನಿರ್ವಹಿಸಲ್ಪಡುವ ಶಾಲೆಗಳು. ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಸುಮಾರು 25,000 ಸಿಬಿಎಸ್‌ಇ ಶಾಲೆಗಳಲ್ಲಿ, ಸುಮಾರು

23,000 ಶಾಲೆಗಳು ಖಾಸಗಿಯಾಗಿ ನಿರ್ವಹಿಸಲ್ಪಡುತ್ತಿವೆ. ಕೆವಿ ಶಾಲೆಗಳು ತಮ್ಮ ಸಂಘಟನೆ ಹೊಂದಿವೆ ಮತ್ತು ಅನೇಕ ಖಾಸಗಿ ಶಾಲೆಗಳು ತಮ್ಮದೇ ಜಾಲವನ್ನು ಹೊಂದಿವೆ. ಉದಾಹರಣೆಗೆ ಡಿಎವಿ, ಡಿಪಿಎಸ್ ಶಾಲೆಗಳು ಅಥವಾ ಪ್ರತ್ಯೇಕ ಶಾಲೆಗಳು. ಇವು ತಮ್ಮದೇ ಆದ ವೈಯಕ್ತಿಕ ಆವಶ್ಯಕತೆಗಳನ್ನು ನಿರ್ಧರಿಸಿದ ದೃಷ್ಟಿಕೋನಗಳನ್ನು ಹೊಂದಿವೆ. ಎನ್‌ಸಿಇಆರ್‌ಟಿಯು ತಾನು ಇವುಗಳಿಗಾಗಿ ಸಾಂಸ್ಥಿಕ ಅಧಿಕಾರವನ್ನು ಹೊಂದಿಲ್ಲ ಮತ್ತು ಒಂದು ಸಲಹಾ ಮಂಡಳಿಗೆ ಈ ಶಾಲೆಗಳ ಸಂಖ್ಯೆಯು ತುಂಬಾ ದೊಡ್ಡದು ಎನ್ನುತ್ತದೆ. ಸಿಬಿಎಸ್‌ಇಯು ಪಠ್ಯಕ್ರಮವನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿದೆ. ಆದರೆ ಅದರ ಮುಖ್ಯ ಕಾರ್ಯಗಳು ಅಂಗಸಂಸ್ಥೆಯಾಗಿ ಸಂಯೋಜನೆ ನೀಡುವುದು ಮತ್ತು ಸಾರ್ವಜನಿಕ ಪರೀಕ್ಷೆಗಳನ್ನು ನಡೆಸುವುದಾಗಿದೆ. ಪುಸ್ತಕಗಳನ್ನು ಸಿದ್ಧಗೊಳಿಸಿದ ಅನಂತರ ಶಿಕ್ಷಕರಿಗಾಗಿ ಕೆಲವು ಕಾರ್ಯಾಗಾರಗಳನ್ನು ನಡೆಸಲಾಯಿತು ಆದರೆ ಅವು ಬಹು ಸೀಮಿತವಾದವುಗಳಾಗಿವೆ. ಉದಾಹರಣೆಗೆ ಆರ್‌ಐಇ, ಭೋಪಾಲ್ ನಲ್ಲಿ (ಎನ್‌ಸಿಇಆರ್‌ಟಿ ಸಂಸ್ಥೆಗಳ ಗುಂಪಿನ ಭಾಗ) ಹೊಸ ಪಠ್ಯಪುಸ್ತಕಗಳನ್ನು ಪರಿಚಯಿಸಿದ ಅನಂತರ ಸಮಾಜ ವಿಜ್ಞಾನಕ್ಕಾಗಿ ಕಾರ್ಯಾಗಾರಗಳನ್ನು ನಡೆಸಲಾಯಿತು. ಆ ಪ್ರದೇಶದಲ್ಲಿರುವ ಸಾವಿರಾರು ಶಾಲೆಗಳಲ್ಲಿ ಬಹುಶಃ ಕೇವಲ ಹದಿನೈದರಿಂದ ಇಪ್ಪತ್ತು ಶಾಲೆಗಳು ಮಾತ್ರ ಭಾಗವಹಿಸಿದ್ದವು. ದೃಷ್ಟಿಕೋನ ನಿರ್ಮಾಣದ ಅಗತ್ಯವಿರುವಲ್ಲಿ, ದೂರದರ್ಶನದ ಮೂಲಕ ಕೂಡ ಶಿಕ್ಷಕರ ಸಂವಹನವು ಪರಿಣಾಮಕಾರಿಯಾಗಿರುವುದಿಲ್ಲ.

ಹೀಗಾಗಿ, ಪ್ರತ್ಯೇಕ ಶಾಲೆಗಳ ಶಿಕ್ಷಕರಿಗೆ ಪಠ್ಯಪುಸ್ತಕಗಳ ದೃಷ್ಟಿಕೋನ ಮತ್ತು ವಿಷಯಕ್ಕೆ ಜವಾಬ್ದಾರರಾಗಿರುವವರೊಂದಿಗೆ ಸಂವಾದಕ್ಕೆ ಅವಕಾಶವಿಲ್ಲ. ಆದ್ದರಿಂದ ಇವುಗಳನ್ನು ಮಿತಿಮೀರಿದವು ಎಂದು ಮುಕ್ತವಾಗಿ ವ್ಯಾಖ್ಯಾನಿಸಿ ಮತ್ತು ಅನೇಕ ಚಟುವಟಿಕೆಗಳನ್ನು ಅನಗತ್ಯವೆಂದು ಪರಿಗಣಿಸಲಾಗಿದೆ. ಅವರಲ್ಲಿ ಹಲವರು ಸಮಾಜ ವಿಜ್ಞಾನಗಳ ತರಗತಿಯನ್ನು ಸಂವಾದಾತ್ಮಕವಾಗಿಸುವ ಪ್ರಶ್ನೆಗಳನ್ನು ಅಥವಾ ಚಟುವಟಿಕೆಗಳನ್ನು ಬಿಟ್ಟುಬಿಡುತ್ತಾರೆ. ಅವರು ತರಗತಿಯಲ್ಲಿ ಹೇಳಿ ಬರೆಯಿಸಬಹುದಾದ ಮಾಹಿತಿಯ ತುಣುಕುಗಳನ್ನು ಹುಡುಕಲು ಮರಳುತ್ತಾರೆ. ಪಠ್ಯದ ಚೈತನ್ಯವು ಆಗಾಗ್ಗೆ ಅನೂರ್ಜಿತಗೊಳ್ಳುತ್ತದೆ. ಅದೇ ಸಮಯದಲ್ಲಿ, ಅವರ ಅಭಿಪ್ರಾಯಗಳು ಮತ್ತು ಅನುಭವವನ್ನು ಕೇಳುವವರು ಯಾರೂ ಇಲ್ಲದಿರುವುದರಿಂದ, ಒಟ್ಟಾರೆ ನಿರೀಕ್ಷೆಗಳು ಕಾರ್ಯಸಾಧ್ಯವಾದುದಕ್ಕಿಂತ ಹೆಚ್ಚಿರಬಹುದು. ಅವರಿಗೆ ನಮ್ಯತೆಯನ್ನು ಅನುಸರಿಸಲು ಅವರ ಆಡಳಿತ ಸಂಸ್ಥೆಗಳು ಅನುಮತಿ ನೀಡುವುದಿಲ್ಲ ಮತ್ತು ಹೊಸ ಪಠ್ಯಪುಸ್ತಕಗಳೊಂದಿಗೆ ಪ್ರಕ್ರಿಯೆಗಳನ್ನು ಸ್ಥಳದಲ್ಲಿ ಹಿಡಿದಿಟ್ಟುಕೊಳ್ಳುವ ರಚನೆಗಳ ಬದಲಿಗೆ, ಅವರನ್ನು ದೂಷಿಸಿ ಬದಿಗೊತ್ತಲಾಗುತ್ತದೆ.

ಅಂತಹ ನಿರ್ವಾತದಲ್ಲಿ, ಯಾವುದೇ ಸಾರ್ವಜನಿಕ ಚರ್ಚೆಯು ಪಠ್ಯಪುಸ್ತಕಗಳನ್ನು ಹೊಗಳುವ ಅಥವಾ ತೆಗಳುವ ತೀವ್ರ ನಿಲುವುಗಳನ್ನು ತಾಳುತ್ತದೆ. ದುರ್ಬಲ ವಾತಾವರಣದಲ್ಲಿ ಉಳಿದುಕೊಂಡಿರುವ ಯಾವುದೇ ಪಠ್ಯಪುಸ್ತಕಗಳು, ಚರ್ಚೆಗೆ ಒಳಗಾಗದೆಯೇ, ಸೊರಗಿದ ಅನುಭವದೊಂದಿಗೆ ಮತ್ತು ಅನಂತರ ಶಿಕ್ಷಕ ಸಮುದಾಯದಿಂದ ಅಂಗೀಕರಿಸಲ್ಪಡುತ್ತವೆ.

ಅನೇಕ ಶಿಕ್ಷಕರು ಪಠ್ಯಪುಸ್ತಕ ಸಾಮಗ್ರಿಗಳನ್ನು ಜಾರಿಗೊಳಿಸಬೇಕಾದ ಕಾರ್ಯಗಳಾಗಿ ತೆಗೆದುಕೊಳ್ಳುತ್ತಾರೆ ಮತ್ತು ಅವರು ನಂಬುವ ವಿಷಯವಾಗಿ ಅಲ್ಲ. ಇಂತಹ ವಾತಾವರಣದಲ್ಲಿ ಶಿಕ್ಷಕರಲ್ಲಿ ಉದಾಸೀನತೆ ಬೆಳೆಯುತ್ತದೆ. ಇದು ಸಿನಿಕತನದ ದೃಷ್ಟಿಕೋನವನ್ನು ಮಾತ್ರ ನೀಡುತ್ತದೆ. ಕೆಲವು ಶಿಕ್ಷಕರ ಅಭಿಶಿಕ್ಷಣ ಅಧಿವೇಶನಗಳಲ್ಲಿ ಕೆಲವು ಶಾಲಾ ಶಿಕ್ಷಕರು ಮತ್ತು ಆಡಳಿತ ಮಂಡಳಿಗಳು ನನ್ನನ್ನು ಅವರೆಂದೂ ಭೇಟಿ ಮಾಡಲಿಚ್ಛಿಸದ ಎನ್‌ಸಿಇಆರ್‌ಟಿ ದೆವ್ವದ ಅವತಾರದಂತೆ ಕಂಡಿದ್ದಾರೆ! ಶ್ರೀನಿವಾಸನ್ ತನ್ನ ಇಪಿಡಬ್ಲ್ಯೂ ಪ್ರಬಂಧವನ್ನು ವಿದ್ಯಾರ್ಥಿಯ ಉಲ್ಲೇಖದೊಂದಿಗೆ ಪ್ರಾರಂಭಿಸುತ್ತಾರೆ:

‘ಏಪ್ರಿಲ್ 2014 ರಲ್ಲಿ, 10 ನೇ ತರಗತಿಯ ಸಮಾಜ ವಿಜ್ಞಾನ ಮಂಡಳಿಯ ಪರೀಕ್ಷೆಯ ಪ್ರಶ್ನೆಗೆ ವಿದ್ಯಾರ್ಥಿಯೊಬ್ಬ ನೀಡಿದ ಕೋಪದ ಪ್ರತಿಕ್ರಿಯೆಯನ್ನು ಪತ್ರಿಕೆಯೊಂದು ವರದಿ ಮಾಡಿದೆ. ಈ ವಿದ್ಯಾರ್ಥಿಯು, ಸಮಾಜ ವಿಜ್ಞಾನ ಪಠ್ಯಕ್ರಮದ ವಿನ್ಯಾಸಕಾರರ ವಿವರಗಳನ್ನು ತಿಳಿದುಕೊಳ್ಳಲು ಬಯಸಿದ್ದನು ಮತ್ತು ಅವರನ್ನು ಕೊಲ್ಲಲು ಬಯಸಿದ್ದನು (*ರಾಜಸ್ಥಾನ್ ಪತ್ರಿಕಾ* 2014 ). 2012 ರಲ್ಲಿ, ನವದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್ - ಎನ್‌ಸಿಇಆರ್‌ಟಿ) ಪ್ರಕಟಿಸಿದ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿದ್ದ ವ್ಯಂಗ್ಯಚಿತ್ರಗಳಂತಹ ಸಾಮಗ್ರಿಗಳನ್ನು "ಅನುಚಿತ" ಬಳಕೆ ಎಂದು ಕರೆದು, ಇದನ್ನು ನಮ್ಮ ಸಂಸತ್ತಿನಲ್ಲಿ ಚರ್ಚಿಸಿ ಆ ಸಂದರ್ಭದಲ್ಲಿ ಸಂಸತ್ತನ್ನು ಮುಂದೂಡಬೇಕಾಯಿತು. ಇದು ಶಾಲಾ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ವ್ಯಂಗ್ಯಚಿತ್ರಗಳನ್ನು ಬೋಧನಾ ಸಾಧನವಾಗಿ ಬಳಸುವುದನ್ನು ಕುರಿತು ವರ್ಷವಿಡೀ ಚರ್ಚೆಗೆ ಕಾರಣವಾಯಿತು (ಉದಾಹರಣೆಗೆ, ಸಿಂಗ್ 2012 ; ವಾಂಖೆಡೆ 2012 ನೋಡಿ). ಅನಂತರ, ನವದೆಹಲಿಯ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಯು (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ - ಸಿಬಿಎಸ್‌ಇ), ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿರುವ "ದೃಶ್ಯಗಳ"ನ್ನು ಕುರಿತು ಮಂಡಳಿಯ ಪರೀಕ್ಷೆಗಳಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳಬಾರದೆಂದು ಶಾಲೆಗಳಿಗೆ ತಿಳಿಸಿತು (*ಹಿಂದೂ* 2010).

ಸಮಸ್ಯೆಯ ಬಗ್ಗೆ ಶಿಕ್ಷಕರಲ್ಲಿರುವ ಅಲಕ್ಷ್ಯವೇ ಒಂದು ಕಾರಣವಾಗಿದೆ. ಅವರ ಅಭಿಪ್ರಾಯಗಳನ್ನು ಕೇಳಲಿಲ್ಲ. ಅವರು ಪಠ್ಯಪುಸ್ತಕಗಳನ್ನು ಹೇಗೆ ಬಳಸಿದರು ಎಂಬುದನ್ನು ಪರಿಗಣಿಸಲಿಲ್ಲ. ದೃಶ್ಯ ಪ್ರಶ್ನೆಗಳನ್ನು ನಿಷೇಧಿಸಿದುದು ಅವರಿಗೆ ಯಾವುದೇ ವ್ಯತ್ಯಾಸವನ್ನು ಉಂಟುಮಾಡಲಿಲ್ಲ. ಈ ಶಿಕ್ಷಕರ ಅಲಕ್ಷ್ಯ ಅವರೊಂದಿಗಿನ ಸಂವಾದ ನಡೆಸದ್ದರಿಂದಲೇ ಸೃಷ್ಟಿಯಾಗಿದೆ. ದೃಷ್ಟಿಕೋನದಲ್ಲಿ ಬದಲಾವಣೆಯನ್ನು ತರುವ ಪಠ್ಯಪುಸ್ತಕಗಳಿಗೆ, ಸಂವಾದವು ಅತ್ಯಗತ್ಯವಾಗಿರುತ್ತದೆ ಮತ್ತು ನಿಮ್ಮದೇ ಆದುದನ್ನು ಕಂಡುಕೊಳ್ಳುವ ಐಚ್ಛಿಕ ಸಂಗತಿಯಲ್ಲ. ಅನೇಕರಿಗೆ, ಹೊಸ ಪುಸ್ತಕಗಳು ಅವರ ಪದವಿ ಅಥವಾ ಸ್ನಾತಕೋತ್ತರ ಕಾರ್ಯಕ್ರಮದ ಸಂಘಟನೆಗೆ ಹೊಂದಿಕೆಯಾಗುವುದಿಲ್ಲ. ಸಂವಾದ ಸಾಧ್ಯವಾಗದಿದ್ದರೆ ನಾನು ನನ್ನ ಸಹೋದ್ಯೋಗಿಯ ಸಲಹೆಯನ್ನು ತೆಗೆದುಕೊಳ್ಳುತ್ತೇನೆ ಮತ್ತು ಬಹುಶಃ ಈ ಪ್ರಕ್ರಿಯೆಯನ್ನು ತ್ಯಜಿಸುತ್ತೇನೆ.

**ಶಿಕ್ಷಕರ ಸಂವಾದವನ್ನು ಕಡ್ಡಾಯಗೊಳಿಸಲು ಹೊಸ ಸಾಂಸ್ಥಿಕ ಮಾನದಂಡಗಳನ್ನು ರೂಪಿಸಬಹುದೇ?**

ಆದಾಗ್ಯೂ, ಚಿರನೂತನ ಆಶಾವಾದಿಯಾಗಿ, ಶಿಕ್ಷಕರೊಂದಿಗಿನ ಸಂವಾದವನ್ನು ಸಾಂಸ್ಥಿಕವಾಗಿ ಆಯೋಜಿಸಬಹುದೆಂದು ನಾನು ನಂಬುತ್ತೇನೆ. ಇದಕ್ಕಾಗಿ ಎನ್‌ಸಿಇಆರ್‌ಟಿ ಮತ್ತು ಸಿಬಿಎಸ್‌ಇ ಎರಡೂ ಸಂಯೋಜಿತ ಶಿಷ್ಟಾಚಾರವನ್ನು ರೂಪಿಸಬೇಕು. ಮೊದಲ ತತ್ತ್ವವಾಗಿ ನಾವು ಎಲ್ಲ ಶಿಕ್ಷಕರನ್ನು, ಅವರು ಸರ್ಕಾರಿ ಶಾಲೆಗಳಲ್ಲಿರಲಿ ಅಥವಾ ಖಾಸಗಿ ಶಾಲೆಗಳಲ್ಲಿರಲಿ- ತಲಪಬೇಕು. ತರಗತಿಯಲ್ಲಿ ಸಾಮಾನ್ಯವಾಗಿ ಆಚರಣೆ ಮಾಡುವ ಸಂಸ್ಕೃತಿಯನ್ನು ಬದಲಾಯಿಸುವುದೇ ಇದರ ಪ್ರಯತ್ನವಾಗಿದೆ. ಇಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡೂ ಸಮಾನವಾಗಿವೆ. ಭವಿಷ್ಯಕ್ಕೆ ಹೂಡಿಕೆ ಮಾಡುವ ಆವಶ್ಯಕತೆಯಿದೆ ಮತ್ತು ಎಲ್ಲ ಶಿಕ್ಷಕರನ್ನು ಉದ್ದೇಶಿಸದೆ ಇದನ್ನು ಮಾಡಲಾಗುವುದಿಲ್ಲ. ಆದ್ದರಿಂದ ಇದಕ್ಕೆ ಸಾರ್ವಜನಿಕ ಪ್ರಯತ್ನ ಮತ್ತು ಸರ್ಕಾರದ ಹಣಕಾಸಿನ ಹೂಡಿಕೆಯ ಅಗತ್ಯವಿದೆ. ಬದಲಾದ ತರಗತಿಯ ಸಂಸ್ಕೃತಿಯು ಸಾರ್ವಜನಿಕ ಒಳಿತಿನಂತಿದೆ- ಇದು ಎಲ್ಲರಿಗೂ ಪ್ರಯೋಜನಕಾರಿಯಾಗಿದೆ ಆದರೆ ಸಾರ್ವಜನಿಕ ಪ್ರಯತ್ನವಿಲ್ಲದೆ ಇದು ಆಗುವುದಿಲ್ಲ.

ಆರ್‌ಐಇ ಅನ್ನು ಕೇಂದ್ರವಾಗಿಟ್ಟುಕೊಂಡು ಶಾಲೆಗಳಿಗೆ *ರಾಜ್ಯ ಸಂಪನ್ಮೂಲ ಗುಂಪು*ಗಳನ್ನು ರಚಿಸುವ ಆದೇಶವನ್ನು ಎನ್‌ಸಿಇಆರ್‌ಟಿ ತೆಗೆದುಕೊಳ್ಳಬೇಕಾಗಿದೆ. ಈ ಸಂಪನ್ಮೂಲ ಗುಂಪುಗಳು ಸ್ವತಃ ಶಿಕ್ಷಕರಾಗಬಹುದು, ವಿಶ್ವವಿದ್ಯಾಲಯಗಳು ಅಥವಾ ಕಾಲೇಜುಗಳಲ್ಲಿನ ಪ್ರಾಧ್ಯಾಪಕರು ಅಥವಾ ಅಗತ್ಯವಿರುವ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಎನ್‌ಜಿಒ ಸಿಬ್ಬಂದಿಗಳ ಮಿಶ್ರಣವಾಗಿರಬಹುದಾಗಿದೆ. ನಾವು ಈ ಪ್ರಕ್ರಿಯೆಗಳನ್ನು ವಿವಿಧ ರಾಜ್ಯಗಳ ಹಂತದಲ್ಲಿ ಮಾಡಿದ್ದೇವೆ ಮತ್ತು ಇದು ಕಾರ್ಯಸಾಧ್ಯ ಎಂದು ತಿಳಿದಿದೆ. ವಿಷಯ ಸಂಬಂಧಿ ಗುಂಪುಗಳನ್ನು ರೂಪಿಸಲು ಸಮಯ, ಹೂಡಿಕೆ ಮತ್ತು ದರ್ಶನದ ಅಗತ್ಯವಿದೆ. ಇದು ಎನ್‌ಸಿಇಆರ್‌ಟಿಯ ಪಾತ್ರವಾಗಿರಬೇಕು. ಅದೇ ಸಮಯದಲ್ಲಿ ಸಿಬಿಎಸ್‌ಇಯು ಮಾನ್ಯತೆ ಪಡೆದ ಎಲ್ಲ ಸಂಯೋಜಿತ ಶಾಲೆಗಳು, ಸರ್ಕಾರಿ ಅಥವಾ ಖಾಸಗಿಯಾಗಿರಲಿ, ಈ ಪುನಶ್ಚೇತನ ಕಾರ್ಯಕ್ರಮಗಳಿಗೆ ವಿಷಯ ತಂಡಗಳನ್ನು ಕಳುಹಿಸಬೇಕು ಎಂದು ಕಡ್ಡಾಯಗೊಳಿಸಬೇಕು. ಇದನ್ನು ಸಕ್ರಿಯಗೊಳಿಸುವ ಆದೇಶದ ಅಗತ್ಯವಿದೆ. ಆದೇಶವು ಅವರನ್ನು ಕರೆತರಬಹುದು. ಆದರೆ ಪ್ರಕ್ರಿಯೆಯನ್ನು ಉಳಿಸಿಕೊಳ್ಳಲು ಎನ್‌ಸಿಇಆರ್‌ಟಿಯಿಂದ ಶೈಕ್ಷಣಿಕ ಪ್ರಯತ್ನ ಅತ್ಯಗತ್ಯ. ತರಬೇತಿ ಅವಧಿಗಳು ಮತ್ತು ಸಂವಾದಗಳು ಆಕರ್ಷಕವಾಗಿರಬೇಕು. ಆಗ ಶಿಕ್ಷಕರು ಅವುಗಳಿಗೆ ಹಾಜರಾಗಲು ಬಯಸುತ್ತಾರೆ. ಇದು ಹೆಚ್ಚು ಕಷ್ಟಕರವಾಗಿದ್ದರೂ, ಅಂತಿಮವಾಗಿ ಬಲವಾದ ಸಂಪನ್ಮೂಲ ಗುಂಪುಗಳು ಮತ್ತು ಶಿಕ್ಷಕರ ಸಮಾನ ಮನಸ್ಕ ಗುಂಪುಗಳನ್ನು ರಚಿಸುವ ಕಡೆಗೆ ನಾವು ಚಲಿಸಬೇಕಾಗಿದೆ. ಎನ್‌ಸಿಇಆರ್‌ಟಿ ಮತ್ತು ಆರ್‌ಐಇ ಮೇಲ್ವಿಚಾರಣೆಯಲ್ಲಿ ಸ್ಥಾಪಿಸಲಾದ ಸಂಪನ್ಮೂಲ ತಂಡಗಳು ನಡೆಸುವ ತರಬೇತಿ ಅವಧಿಗಳಿಗೆ ಹಾಜರಾಗಲು ಪ್ರತಿಯೊಬ್ಬ ಶಿಕ್ಷಕರನ್ನು ಸಿಬಿಎಸ್‌ಇಯು ಕೇಳುತ್ತದೆ.

ಶಿಕ್ಷಕರ ಈ ಸಮಾನ ಮನಸ್ಕ ಗುಂಪನ್ನು ವೃತ್ತಿಪರರ ಸಮೂಹವಾಗಿ ನೋಡಬೇಕು ಮತ್ತು ಪ್ರತ್ಯೇಕ ಶಾಲೆಯ ಅಥವಾ ಆಡಳಿತ ಮಂಡಳಿಯ ಹೆಸರಿನಲ್ಲಿ ವಿಘಟಿತ ಮತ್ತು ಪ್ರತ್ಯೇಕಗೊಳ್ಳಲು ಅವಕಾಶ ನೀಡಬಾರದು. ಪಠ್ಯಪುಸ್ತಕಗಳ ಆಯ್ಕೆ ಅಥವಾ ತರಗತಿ ಪ್ರಕ್ರಿಯೆಗಳ ವಿನ್ಯಾಸ ಅಥವಾ ಅಧ್ಯಾಯಗಳ ಆಯ್ಕೆಯನ್ನು ಶಾಲಾ ಆಡಳಿತ ಮಂಡಳಿ ಮತ್ತು ಅವರ ಶಿಕ್ಷಕರಿಗೆ ನಿರ್ಧರಿಸಲು ಮುಕ್ತವಾಗಿ ಬಿಡಬೇಕು. ಇದು ವಸ್ತುವಿಷಯ ಮತ್ತು ಶಿಕ್ಷಣಶಾಸ್ತ್ರದ ಸಂವಾದದ ಪ್ರಕ್ರಿಯೆಯಾಗಿರುತ್ತದೆಯೇ ಹೊರತು ಉನ್ನತ ಅಧಿಕಾರವು ಎಲ್ಲ ಶಾಲೆಗಳು ಅನುಸರಿಸಬೇಕಾದ ಏಕರೂಪದ ಸ್ವರೂಪವೆಂದು ಹೇರುವುದಲ್ಲ ಮತ್ತು ಇದು ಮಂಡಳಿಯ ನಿಜವಾದ ಕೆಲಸವಾಗಿದೆ. ಹೊಸ ವ್ಯವಸ್ಥೆಯಲ್ಲಿ ಎರಡು ಸಂಸ್ಥೆಗಳನ್ನು ಒಟ್ಟಿಗೆ ತರುವ ಶಿಷ್ಟಾಚಾರದ ಅಗತ್ಯವಿದೆ. ಇಂದು ನಾವು ಈಗಾಗಲೇ ಪಠ್ಯಪುಸ್ತಕಗಳು ಮತ್ತು ಗೈಡ್‌ಗಳ ಖಾಸಗಿ ಮಾರುಕಟ್ಟೆಯೊಂದಿಗೆ ಹೋರಾಡುತ್ತಿದ್ದೇವೆ. ಅದು ಈಗಾಗಲೇ ಒಂದು ಸ್ಥಾನವನ್ನು ಆಕ್ರಮಿಸಿಕೊಂಡಿದೆ ಮತ್ತು ದೀರ್ಘಾವಧಿಯಲ್ಲಿ ಅದು ಶಿಕ್ಷಕರನ್ನು ಪ್ರತ್ಯೇಕಿಸುತ್ತದೆ. ಕೆಲವು ರಾಜ್ಯ ಸರ್ಕಾರಗಳು ಇದನ್ನು ಪ್ರಯತ್ನಿಸಿದವು. ಆದರೆ ಪ್ರಕ್ರಿಯೆಯನ್ನು ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ.

**ಮೊದಲು ಮೌಲ್ಯಮಾಪನ ಮಾನದಂಡಗಳು, ಅನಂತರ ಪಠ್ಯಪುಸ್ತಕಗಳು**

ಶಿಕ್ಷಕರೊಂದಿಗಿನ ಈ ಸಂವಾದವು ಕೆಲವೊಮ್ಮೆ ನಿಷ್ಠುರವಾಗಿರುತ್ತದೆ. ಶಿಕ್ಷಣಶಾಸ್ತ್ರ ವಿಧಾನಗಳು ಅಥವಾ ವಿಷಯವನ್ನು ಕುರಿತ ಯಾವುದೇ ಚರ್ಚೆಯು ಶೀಘ್ರದಲ್ಲೇ ಪ್ರಶ್ನೆಯೊಂದಕ್ಕೆ ತಿರುಗುತ್ತದೆ, 'ಆದರೆ ಇದು ನಮ್ಮ ಪರೀಕ್ಷಾ ಮಾದರಿಗೆ ಸರಿ ಹೊಂದುವುದಿಲ್ಲ'. ಇದು ನಿಜವಾದ ನಿಶ್ಚಲತೆ ಆಗಿದೆ. ಮೌಲ್ಯಮಾಪನ ಮಾಡುವ ಕ್ರಮವನ್ನು ಬದಲಾಯಿಸಲು ನಾವು ಸಿದ್ಧರಿಲ್ಲದಿದ್ದರೆ, ಸಂವಾದವು ಮುರಿದುಹೋಗುತ್ತದೆ ಅಥವಾ ಪಠ್ಯಕ್ರಮವನ್ನು ಪೂರ್ಣಗೊಳಿಸುವುದೇ ಅಂತಿಮವಾಗಿಬಿಡುತ್ತದೆ. ಏಕೆಂದರೆ, ಮೂರನೇ ವ್ಯಕ್ತಿಯೊಬ್ಬರು ಇಡೀ ಪಠ್ಯಕ್ರಮದ ಆಧಾರದ ಮೇಲೆ ಪರೀಕ್ಷೆಯನ್ನು ಏರ್ಪಡಿಸುತ್ತಾರೆ. ತಮ್ಮ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲು ಶಿಕ್ಷಕರೇಕೆ ಜವಾಬ್ದಾರರಾಗಬಾರದು? ಭಯ ಮತ್ತು ಆತಂಕವನ್ನು ಸೃಷ್ಟಿಸುವ ಮೌಲ್ಯಮಾಪನ ವಿಧಾನಗಳಿಗಿಂತ ಹೆಚ್ಚಿನ ಕಲಿಕೆಗೆ ಹೇಗೆ ಸಹಾಯಕವಾಗಬಹುದು?

ಮಕ್ಕಳಲ್ಲಿರುವ ಆಸಕ್ತಿ ಮತ್ತು ಕಲಿಕೆಯನ್ನು ನೀವು ಹೇಗೆ ನಿರ್ಣಯಿಸುತ್ತೀರಿ? ಒಬ್ಬರು ಕಲಿಕೆಗೆ ಸಹಾಯ ಮಾಡುವ ಮೌಲ್ಯಮಾಪನದ ರೂಪಗಳಲ್ಲಿ ಆಸಕ್ತಿಯನ್ನು ಹೊಂದಿದ್ದರೆ, ನಾವು ಅದರೊಡನೆ ಹೇಗೆ ಪ್ರಯೋಗ ನಡೆಸುತ್ತೇವೆ? ೮ ನೇ ತರಗತಿಯ ಬೋರ್ಡ್ ಪರೀಕ್ಷೆಗಾಗಿ ತೆರೆದ ಪುಸ್ತಕ ಪರೀಕ್ಷೆಗಳು ಮತ್ತು ಪ್ರಾಯೋಗಿಕ (ಹ್ಯಾಂಡ್ಸ್-ಆನ್) ಪರೀಕ್ಷೆಗಳ ಎಚ್‌ಎಸ್‌ಟಿಪಿಯ ಹಿಂದಿನ ಅನುಭವವು ನಮಗೆ ತಲಪಬೇಕಾದ ಗುರಿಯ ಮಾದರಿಯನ್ನು ಒದಗಿಸಿವೆ. ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಹಲವಾರು ಪ್ರಕರಣಗಳನ್ನು ಹೊಂದಿದ್ದವು ಮತ್ತು ಪ್ರತಿ ವಿಭಾಗದ ಅನಂತರ, ಪ್ರಶ್ನೆಗಳನ್ನು ಹೊಂದಿರುವ ಕಥೆಗಳನ್ನು ಬಳಸಿದವು. ಇದು ಸಕ್ರಿಯ ಭಾಗವಾಗಿತ್ತು. ಈ ಪ್ರಶ್ನೆಗಳು ಮಿಶ್ರವಾಗಿದ್ದವು: ಗ್ರಹಿಕೆ, ಕಥೆಯಲ್ಲಿ ಹುದುಗಿರುವ ಪರಿಕಲ್ಪನೆಯ ಕಾರಣ ಹುಡುಕುವ ತಾರ್ಕಿಕ ಸಾಮರ್ಥ್ಯ, ದೃಶ್ಯಗಳು ಮತ್ತು ನಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು, ಪರಿಕಲ್ಪನಾ ಹಂತದಲ್ಲಿ ನಿಮ್ಮ ಅಭಿಪ್ರಾಯವನ್ನು ಕೇಳುವ ಮುಕ್ತ ಪ್ರಶ್ನೆಗಳು ಇದ್ದವು.

(*ಬಾತ್ರಾ ಮತ್ತು ಸಮಾಜಿಕ್ ಅಧ್ಯಾನ್*). ಗಮನಾರ್ಹವಾಗಿ, ಲಿಖಿತ ರೂಪದಲ್ಲಿ ತಮ್ಮ ಸ್ವಂತ ಮಾತುಗಳಲ್ಲಿ ಉತ್ತರಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಮೌಖಿಕ ತಿಳಿವಳಿಕೆಗೆ ಒತ್ತನ್ನು ನೀಡಲಾಗಿತ್ತು. ಶಿಕ್ಷಕರು ತಮ್ಮದೇ ಆದ ತಂತ್ರಗಳನ್ನು ರೂಪಿಸಿದರು (*ಪ್ರಕಾಶ್ ಕಾಂತ್*). ಅನೇಕ ಶಿಕ್ಷಕರು ಚಿಕ್ಕ ಕಾರ್ಯಯೋಜನೆಗಳನ್ನು ತಯಾರಿಸಿದ್ದರು ಅಥವಾ ಇವೇ ಚಿಂತನೆಗಳನ್ನು ತಮ್ಮ ಶಾಲಾ ಸಂದರ್ಭಕ್ಕೆ ಅನ್ವಯಿಸುವಂತೆ ಅವುಗಳನ್ನು ವಿನ್ಯಾಸಗೊಳಿಸಿದ್ದರು (*ಶೋಭಾ ಬಾಜಪೈ*).

ಮೌಲ್ಯಮಾಪನ ಪ್ರಕ್ರಿಯೆಯಲ್ಲಿನ ಬದಲಾವಣೆಗಳು ಕಾರ್ಯಕ್ರಮಕ್ಕೆ ಅಂತರ್ಗತವಾದವುಗಳಾಗಿವೆ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ದೃಷ್ಟಿಕೋನದ ಭಾಗವಾಗಿವೆ. ತೆರೆದ ಪುಸ್ತಕ ಪರೀಕ್ಷೆಗಾಗಿ ಒಂದು ಸ್ವರೂಪವನ್ನು ಕ್ರಮೇಣ ರೂಪಿಸಲಾಯಿತು. ಕಾಲಕ್ರಮೇಣ ನಿರೀಕ್ಷೆಗಳನ್ನು ಸಮತೋಲನಗೊಳಿಸಲು ಪಠ್ಯದಲ್ಲಿನ ಅಭ್ಯಾಸಗಳನ್ನು ಪರಿಶೀಲಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳ ಪರಿಶೀಲನೆಯು ಕೌಶಲ ಅಭಿವೃದ್ಧಿಗೆ ನಾವು ಅಳವಡಿಸಿರುವುದಕ್ಕಿಂತ ಹೆಚ್ಚಿನ ಅಭ್ಯಾಸದ ಅಗತ್ಯವಿದೆ ಮತ್ತು ಕಥೆಗಳಿಂದ ಪರಿಕಲ್ಪನಾ ಸಮಸ್ಯೆಗಳನ್ನು ಸೆಳೆಯಲು ಮಕ್ಕಳಿಗೆ ಹೆಚ್ಚಿನ ಸಹಾಯದ ಅಗತ್ಯವಿದೆ ಎಂದು ಸಲಹೆ ನೀಡಿದರು. ಕೆಲವೊಮ್ಮೆ ವಾದದ ನಿರೀಕ್ಷಿತ ಕಾರ್ಯಕ್ರಮಕ್ಕಿಂತ ಸಂಪೂರ್ಣ ಭಿನ್ನವಾಗಿರುವ ಶಿಕ್ಷಕರ ವ್ಯಾಖ್ಯಾನಗಳನ್ನು ನಾವು ಸರಿಪಡಿಸಬೇಕಾಗಿತ್ತು. ಆದ್ದರಿಂದ ಇದು ಪಠ್ಯಪುಸ್ತಕ ಅಭಿವೃದ್ಧಿ ಯೋಜನೆಯಾಗಿರಲಿಲ್ಲ. ಆದರೆ ಪಠ್ಯಪುಸ್ತಕಗಳು, ಶಿಕ್ಷಕರ ಸಂವಾದ ಮತ್ತು ಮೌಲ್ಯಮಾಪನವನ್ನು ಒಟ್ಟಿಗೆ ಪರಿಗಣಿಸುವ ಸಮಾಜ ವಿಜ್ಞಾನದ ಕಾರ್ಯಕ್ರಮವಾಗಿತ್ತು.

ನಾವು ಪಠ್ಯಪುಸ್ತಕಗಳಲ್ಲಿ ಕೆಲಸ ಮಾಡಿದ ಹೆಚ್ಚಿನ ರಾಜ್ಯ ಸರ್ಕಾರಗಳಲ್ಲಿ, ನಾವು ನಮ್ಮ ಕೆಲಸವನ್ನು ಮುಗಿಸುವ ಹೊತ್ತಿಗೆ ಆದೇಶವು ಮುಗಿದುಹೋಗಿರುತ್ತದೆ. ಅನೇಕ ಬಾರಿ, ಅಧಿಕಾರಶಾಹಿ ಮಟ್ಟದಲ್ಲಾದ ಬದಲಾವಣೆಗಳು ಈ ಪಠ್ಯಕ್ರಮ ಸುಧಾರಣೆಯ ಪ್ರಕ್ರಿಯೆಯನ್ನು ನಿಲ್ಲಿಸುತ್ತವೆ ಅಥವಾ ಬದಲಾಯಿಸುತ್ತವೆ. ಈ ದಿಶೆಯಲ್ಲಿ ಯಾವುದೇ ಪ್ರಜ್ಞಾಪೂರ್ವಕ ಬದಲಾವಣೆ ಇಲ್ಲದಿದ್ದರೂ ಮತ್ತು ಪಠ್ಯಪುಸ್ತಕಗಳು ನಿಜವಾಗಿ ಬಳಸಲ್ಪಡುತ್ತಿದ್ದರೂ ಸಹ, ಶಿಕ್ಷಕರ ತರಬೇತಿ ಅಥವಾ ಪರೀಕ್ಷೆಯಲ್ಲಿನ ಬದಲಾವಣೆಗಳು ಹಿಂದಿನ ಸ್ಥಾನಕ್ಕೆ ಸರಿಯಲ್ಪಡುತ್ತವೆ. ಇದು ಆದ್ಯತೆಯ ಕ್ಷೇತ್ರವಲ್ಲ. ಪ್ರಕ್ರಿಯೆಯೊಂದಿಗಿನ ನಿಮ್ಮ 'ಸಹಾಯ' ಮುಗಿದಿದೆ ಎಂದು ನಮಗೆ ಆಗಾಗ್ಗೆ ಹೇಳಲಾಗುತ್ತದೆ. ಉಳಿದುದನ್ನು ಎಸ್‌ಸಿಇಆರ್‌ಟಿ ಸ್ವಂತವಾಗಿ ನಿರ್ವಹಿಸುತ್ತದೆ. ಹೀಗಾಗಿ, ಸುಧಾರಣೆಯು ತುಂಡುತುಂಡಾಗಿದೆ ಮತ್ತು ಸಾಮರ್ಥ್ಯದಿಂದ ಹೊರಗುಳಿಯುತ್ತದೆ. ಈ ಪರಿಸ್ಥಿತಿಯು ಆಗಾಗ್ಗೆ ಬಂದಿರುವುದರಿಂದ ವ್ಯವಸ್ಥಿತ ಸುಧಾರಣೆಯು ಕಾರ್ಯಸೂಚಿಯಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು ಪಠ್ಯಪುಸ್ತಕ ಅಭಿವೃದ್ಧಿಗೆ ಸೀಮಿತವಾಗಿದೆ.

ವಿಷಯಗಳು ಹೇಗೆ ಮುಂದುವರಿಯಬಹುದು? ಪ್ರಕ್ರಿಯೆಯನ್ನು ಹಿಮ್ಮುಖವಾಗಿಸುವುದು ಒಂದು ಮಾರ್ಗವಾಗಿದೆ. ಅಸ್ತಿತ್ವದಲ್ಲಿರುವ ಪಠ್ಯಪುಸ್ತಕಗಳಲ್ಲಿ ವಿವಿಧ ಹಂತಗಳಲ್ಲಿ ಮೌಲ್ಯಮಾಪನಕ್ಕಾಗಿ ಸ್ವರೂಪವನ್ನು

ಬದಲಾಯಿಸಬೇಕಾದಾಗ ಪಠ್ಯಕ್ರಮ ಪರಿಷ್ಕರಣೆ ಪ್ರಕ್ರಿಯೆಯ ಮುಂದಿನ ಸುತ್ತಿನಲ್ಲಿ ಮೊದಲ ಆದೇಶ ಪಠ್ಯಪುಸ್ತಕ ಅಭಿವೃದ್ಧಿ ತಂಡಗಳೊಂದಿಗೆ, ಎನ್‌ಸಿಇಆರ್‌ಟಿ/ಎಸ್‌ಸಿಇಆರ್‌ಟಿ ಆಗಿರಲಿ ಈ ವ್ಯವಸ್ಥೆಗಳು ವ್ಯಾಪಕವಾದ ಶಿಕ್ಷಕರ ಸಂವಾದದೊಂದಿಗೆ ವಿಕಸನಗೊಂಡಿವೆ ಮತ್ತು ಮುಖ್ಯವಾಗಿ, ಹೊಸ ಪಠ್ಯಪುಸ್ತಕಗಳ ವ್ಯವಸ್ಥೆಯನ್ನು ತರುವ ಮೊದಲು ಒಂದು ಶೈಕ್ಷಣಿಕ ವರ್ಷಕ್ಕೆ ಎಲ್ಲ ಶಾಲೆಗಳಲ್ಲಿ ಅಳವಡಿಸಲಾಗಿದೆ. ಆದ್ದರಿಂದ ಮೌಲ್ಯಮಾಪನ ಮಾದರಿಗಳಲ್ಲಿನ ಬದಲಾವಣೆಗಳು ಮುಖ್ಯವಾಗುತ್ತವೆ  ಮತ್ತು ಆದ್ಯತೆಯಾಗುತ್ತವೆ ಹಾಗೂ ಪಠ್ಯಪುಸ್ತಕವು ಎರಡನೇ ಹಂತವಾಗಿರುತ್ತದೆ.

ಶಿಕ್ಷಕರು, ವಿದ್ಯಾರ್ಥಿಗಳು, ಶಾಲೆಗಳು ಮತ್ತು ಪೋಷಕರು ನಿಕಟವಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ. ಸಮಾಲೋಚನೆಯು ಉತ್ಸಾಹಭರಿತವಾಗಿದ್ದು, ಭಾಗವಹಿಸುವಿಕೆಯಿಂದ ಕೂಡಿರಬೇಕಾಗುತ್ತದೆ. ಇದು ಶೈಕ್ಷಣಿಕ ಸಂಸ್ಥೆಗಳು ಮತ್ತು ಪಠ್ಯಪುಸ್ತಕ ಅಭಿವೃದ್ಧಿ ತಂಡಗಳ ಮುಂದಿರುವ ಸವಾಲಾಗಿದೆ. ಸಾಮೂಹಿಕ ಪ್ರಮಾಣದಲ್ಲಿ ಬಳಸಬಹುದಾದ ಪರ್ಯಾಯವನ್ನು ಅಭಿವೃದ್ಧಿಪಡಿಸಲು ವ್ಯವಸ್ಥೆಗೆ ಸಹಾಯ ಮಾಡುವಲ್ಲಿ ಅವರು ಸಮಯವನ್ನು ವಿನಿಯೋಗಿಸಬೇಕಾಗಿದೆ. ಇದು ನಾವು ರಚಿಸಿದ ವಾಸ್ತುಶಿಲ್ಪದ ಮೂಲಾಧಾರವಾಗಿದೆ ಎಂದು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಇದು ಹೆಚ್ಚಿನ ನವೀನ ಪ್ರಯೋಗಗಳನ್ನು ಅಲುಗಾಡಿಸುವ ಪರೀಕ್ಷಾ ಮಾದರಿಯಾಗಿದೆ ಮತ್ತು ಹಾಗಾಗಿ ನಮ್ಮ ಸಂಸ್ಕೃತಿಯೊಳಗೆ ಯಥಾಸ್ಥಿತಿಯ ಪರಿಸ್ಥಿತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಮತ್ತೊಬ್ಬ ಸಹೋದ್ಯೋಗಿಯು 'ನಾಯಿಯನ್ನು ಬಾಲ ಅಲ್ಲಾಡಿಸುವಂತೆ ನೀವು ಸೂಚಿಸುತ್ತಿಲ್ಲವೇ?' ಎಂದು ಟೀಕಿಸಿದರು. ಇಲ್ಲ. ಈ ಮೂಲೆಗಲ್ಲು ಕಮಾನನ್ನು ಹೊತ್ತಿದೆ ಮತ್ತು ಆ ಮೂಲಕ ಇಡೀ ಕಟ್ಟಡವನ್ನು ಹಿಡಿದೆತ್ತುತ್ತದೆ.

ನಾವು ಇದನ್ನು ಸಂವಾದದ ಮೂಲಕ ಪರಿಹರಿಸಬೇಕಾಗಿದೆ. ಆಗ ಪಠ್ಯಪುಸ್ತಕಗಳು ಸ್ವಲ್ಪಮಟ್ಟಿಗೆ ಅಂಗೀಕರಿಸಲ್ಪಟ್ಟ ಈ ಹೊಸ ರೂಢಿಯ ಕಡೆಗೆ  ಸರಿಯತೊಡಗುತ್ತವೆ.

***

**ಪರಾಮರ್ಶನಗಳು:**

Batra, Poonam Social Science Learning in Schools: Perspective and Challenges, New Delhi, Sage, 2010

Samajik Adhyan Shikshan: Ek Prayog, Eklavya, 1994

Srinivasan, M V: Reforming social science curriculum in India, Issues and Challenges, EPW, October 17, 2015

Bajpai, Shobha: Living Democracy, Teacher Plus, May-June, 2018

Kant, Prakash: Samajik Adhyan Navachar: Bachon ke sath mane bhi sekha, Eklavya, (to be published)

Subramaniam, CN: Pursuing the Elusive Goal of Systemic Change in School Education, Mimeo, Institute of Advanced Studies, Shimla, 2019

**ಅರವಿಂದ್ ಸರ್ದಾನ:** ಇವರು ಏಕಲವ್ಯ ಸಮಾಜ ವಿಜ್ಞಾನ ತಂಡದ ಸದಸ್ಯರಾಗಿದ್ದಾರೆ. ಇವರು ಎನ್‌ಸಿಇಆರ್‌ಟಿಯ ಪಠ್ಯಕ್ರಮ ತಂಡ  ಪ್ರಕ್ರಿಯೆಗಳೊಂದಿಗೆ ಮತ್ತು ಇತರ ಅನೇಕ ರಾಜ್ಯ ಸರ್ಕಾರದ ಉಪಕ್ರಮಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದಾರೆ. ಅವರನ್ನು **arvind.sardana@apu.edu.in** ನಲ್ಲಿ ಸಂಪರ್ಕಿಸಬಹುದು.

ಅನುವಾದ:  ಪರಿಶೀಲನೆ: ನಾಗಮಣಿ ಎಸ್. ಎನ್.